# ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗ

ಪ್ರಬುದ್ಧ ಕರ್ನಾಟಕ ಶತಮಾನೋತ್ಸವ, ಮಾನವಿಕ ಮತ್ತು ವಿಜ್ಞಾನ ಕರ್ನಾಟಕ ಸುವರ್ಣ ಮಹೋತ್ಸವ ಆಚರಣೆಯ ವರ್ಷ – 2021

## ಪ್ರಬುದ್ಧ ಕರ್ನಾಟಕ

ಪ್ರಬುದ್ಧ ಕರ್ನಾಟಕ ಭಾರತದ ಕೆಲವೇ ಪ್ರೌಢ ಪತ್ರಿಕೆಗಳ ಶ್ರೇಣಿಯಲ್ಲಿ ಅಗ್ರಮಾನ್ಯವಾದುದು. ಪ್ರಬುದ್ಧ ಕರ್ನಾಟಕ ಕೃಷ್ಣಶಾಸ್ತ್ರಿಗಳು ಕಟ್ಟಿದ ಪ್ರಭಾಪುಂಜ, ಪ್ರತಿಭಾವಲಯ, ಹೊಸಗನ್ನಡದಲ್ಲಿ ಒಂದು ಹೊಸ ಮನ್ವಂತರವನ್ನು ತೆರೆದ ಶಕ್ತಿಗಳಲ್ಲಿ ಪ್ರಬುದ್ಧ ಕರ್ನಾಟಕ ವಹಿಸಿದ ಪಾತ್ರ ಮಹತ್ತರವಾದುದೆಂಬುದನ್ನು ಎಂದಿಗೂ ಮರೆಯುವಂತಿಲ್ಲ. ಕರ್ಣಾಟಕ ಸಂಘ ಅವರ ಪರಿಶ್ರಮದ ಫಲವಾದರೆ, ಪ್ರಬುದ್ಧ ಕರ್ನಾಟಕ ಅವರ ಪ್ರತಿಭೆಯ ದೂರದೃಷ್ಟಿಗಳ ಫಲವಾಗಿದೆ.

ಅಖಂಡ ಕರ್ಣಾಟಕದ ಮೊತ್ತವಾಗಿ ಜನ್ಮ ತಾಳಿದ ಕರ್ಣಾಟಕ ಸಂಘ ಕರ್ಣಾಟಕದ ಎಲ್ಲೆಡೆ ತನ್ನ ಶಾಖೋಪಶಾಖೆಗಳನ್ನು ವಿಸ್ತರಿಸಲು ಅನುವು ಮಾಡಿಕೊಟ್ಟಿತು. ಇದು ಪ್ರಶಂಸನಾರ್ಹ ವಿಷಯವಾಗಿ ಕಂಡು ಬರುತ್ತದೆ. ಇದರ ಸಹೋದರ ಸಂಘವಾಗಿ ಮಹಾರಾಜ ಕಾಲೇಜು, ಮೈಸೂರು ಇಲ್ಲಿ 'ಕರ್ಣಾಟಕ ಸಂಘ' ಉದಯವಾಯಿತು. ಕನ್ನಡ ಸಾಹಿತ್ಯದ ಪುನರುಜ್ಜೀವನದಲ್ಲಿ ಅತಿಶಯವಾಗಿ ಸೇವೆ ಮಾಡಿರುವ ಮೊಟ್ಟಮೊದಲ 'ಕರ್ಣಾಟಕ ಸಂಘ'ಗಳೆರಡೂ ಸ್ಥಾಪಿತವಾದದ್ದು ವಿಶ್ವವಿದ್ಯಾ-ನಿಲಯದೊಳಗೆಯೇ. ಮುಂದೆ ಎರಡೂ ಸಂಘಗಳು ಸಮ್ಮಿಳಿತವಾಗಿ 'ಪ್ರಬುದ್ಧ ಕರ್ಣಾಟಕ' ಬೆಳೆಯಲು ಅನುವು ಮಾಡಿಕೊಟ್ಟದಲ್ಲದೆ, ಎಲ್ಲಾ ಕರ್ಣಾಟಕ ಸಂಘಗಳಿಗೂ ಮಾದರಿಯಾಗಿ ಮಾತ್ರ ಸಂಘವಾಗಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಸಂಘ ಗೋಚರವಾಯಿತು. ಇದಕ್ಕೆ ಸೆಂಟ್ರಲ್ ಕಾಲೇಜಿನ ಭೌತಶಾಸ್ತ್ರದ ಅಧ್ಯಾಪಕರಾಗಿದ್ದ ಬಿ. ವೆಂಕಟನಾರಣಪ್ಪ ಅವರನ್ನು ಮೊದಲು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಆಲೋಚಿಸಲಾಗಿತ್ತು. ಅಂತಿಮವಾಗಿ ಎ.ಆರ್. ಕೃಷ್ಣಶಾಸ್ತ್ರಿ, ಅವರನ್ನೇ ಸಂಘದ ಅಧ್ಯಕ್ಷರಾಗಿ ನೇಮಿಸಲಾಯಿತು. ಮುಂದೆ ಇವರ ಸಂಪಾದಕತ್ವದಲ್ಲಿ ಬೆಳೆದ ಪ್ರಬುದ್ಧ ಕರ್ಣಾಟಕ ಅವರನ್ನು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಪದವಿಗೂ ಏರಿಸಿತು ಎಂಬುದು ಗಮನಾರ್ಹ ವಿಷಯವಾಗಿ ಇಲ್ಲಿ ಗೋಚರವಾಗುತ್ತದೆ.

ಸೆಂಟ್ರಲ್ ಕಾಲೇಜಿನಲ್ಲಿ ತರುಣರನ್ನೂ ವಿದ್ವಾಂಸರನ್ನೂ ಬೇರೆ ಭಾಷೆಗಳ ವ್ಯಕ್ತಿಗಳನ್ನು ಪರಸ್ಪರ ಕಲೆಯುವಂತೆ ಮಾಡಲು ಕೃಷ್ಣಶಾಸ್ತ್ರಿಗಳು ಸ್ಥಾಪಿಸಿದ ವೇದಿಕೆಗಳು ಎರಡು, ಒಂದು 'ಕರ್ಣಾಟಕ ಸಂಘ", ಮತ್ತೊಂದು 1919ರಲ್ಲಿ ಆರಂಭವಾದ 'ಪ್ರಬುದ್ಧ ಕರ್ಣಾಟಕ', ಯಾವುದೇ ಒಂದು ಪತ್ರಿಕೆ ಅಥವಾ ಕಾರ್ಯದ ಪ್ರಾರಂಭದ ಹಿಂದೆ ಆಗಾಧವಾದ ಆಶಯವಿರುತ್ತದೆ. ಅಲ್ಲದೆ ಅಂದಿನ ಸಾಮಾಜಿಕ ಸ್ಥಿತಿಗತಿಗಳು ಕಾರಣವಾಗಿ ಅವು ಜನ್ಮತಳೆಯುತ್ತವೆ. ಅದರಂತೆ 20ನೆಯ ಶತಮಾನದ ಆರಂಭದಲ್ಲಿ ಕನ್ನಡದ ಸ್ಥಿತಿಯೂ ಮೂಲೆ ಗುಂಪಾಗಿ, ಕನ್ನಡ ಎಂದರೆ ಅನಾದರ ತೋರುವ ಸ್ಥಿತಿಯಲ್ಲಿತ್ತು. ಆಗ ಕನ್ನಡಕ್ಕೆ ಮಿಡಿವ ಮನವಾಗಿ ಎ.ಆರ್. ಕೃಷ್ಣಶಾಸ್ತ್ರಿಗಳು ಕಂಡುಬಂದರು. ಮೂಲೆಗುಂಪಾಗಿದ್ದ ಕನ್ನಡಕ್ಕೆ ಒಂದು ಹೊಸ ಚೈತನ್ಯ ಕೊಡಲು 'ಕರ್ನಾಟಕ ಸಂಘದ' ನೆರಳಲ್ಲಿ '1919ರಲ್ಲಿ "ಪ್ರಬುದ್ಧ ಕರ್ಣಾಟಕ" ಪ್ರಾರಂಭವಾಯಿತು.













Download Download Download Download

## Committee Members

| SL No. | Name | Resume |
|---|---|---|
| 1 | **DR.C.B.HONNUSIDDARTHA**<br>Professor & Writer Social & Cultural Organizer | Click |
| 2 | **Dr. N.K. Lolakshi**<br>Professor In Kannada | Click |
| 3 | **Dr. G. K. Nagaraja**<br>Professor of Chemistry | Click |
| 4 | **Dr. Vijayakumari, S. Karikal**<br>Professor and Chairpersion | Click |
| 5 | **Dr.Nagabhushana C**<br>Professor and Director | Click |
| 6 | **Mohan kontar**<br>Professor and IQAC Cell | Click |
| 7 | **Dr.Manjunath M.G**<br>Professor of Kannada | Click |
| 8 | **Dr.Tamil selvi**<br>Professor of Kannada | Click |

ನಿರ್ದೇಶಕರು,
ಪ್ರಸಾರಾಂಗ,
ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಹುಣಸೂರು ರಸ್ತೆ,
ಮೈಸೂರು-570006

ಸಂಪರ್ಕಿಸಿ

0821 - 2415311, 2419387, 2419370

prasarangauom@gmail.com
info-prasaranga@uni-mysore.ac.in
(ನಿಯತಕಾಲಿಕೆಗಳ ವಿಚಾರಣೆಗೆ ಮಾತ್ರ)

ನಿಮ್ಮ ಹೆಸರು

ನಿಮ್ಮ ಮೇಲ್

ನಿಮ್ಮ ಫೋನ್ ಸಂಖ್ಯೆ

ಸಂದೇಶ

ಕಳುಹಿಸಿ

© ಪ್ರಸಾರಾಂಗ. ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ.